

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **20-07-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಸಹಾಬಿ ಹಝ್ರ್‌ರತ್ ಖಲ್ಲಾದ್ ಬಿನ್ ರಾಫಿಅ್ ಝುರ್‌ಖೀ ಮದೀನ ನಿವಾಸಿ (ಅನ್ಸಾರ್) ಆಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ ಭಾಗ್ಯಶಾಲಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಅಲ್ಲಾಹನು ಅನೇಕ ಮಕ್ಕಳನ್ನು ದಯಪಾಲಿಸಿದ್ದನು. ಮುಆಝ್ ಬಿನ್ ರಿಫಾಅ್ ತನ್ನ ಪಿತನಿಂದ ವರದಿ ಮಾಡುತ್ತಾರೆ. ಅವರ ಪಿತ ಹೇಳಿದರು: ನಾನು ನನ್ನ ಸಹೋದರ ಹಝ್ರ್‌ರತ್ ಖಲ್ಲಾದ್ ಬಿನ್ ರಾಫಿಅ್‌ರೊಂದಿಗೆ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲಿ ಬಹಳ ಬಲಹೀನವಾದೊಂದು ಒಂಟೆಯ ಮೇಲೇರಿ ಬದರ್ ಕಡೆಗೆ ಹೊರಟೆವು. ನಾವು ಬುರೀದ್ ಎಂಬ ಸ್ಥಳಕ್ಕೆ ತಲಪಿದೆವು. ಅದು ರೌಹ ತಲಪುವ ಮೊದಲು ಸಿಗುವ ಸ್ಥಳವಾಗಿದೆ. ನಮ್ಮ ಒಂಟೆ ಚಲಿಸಲಾಗದೆ ಕುಳಿತುಬಿಟ್ಟಿತು. ಆಗ ನಾನು ಪ್ರಾರ್ಥಿಸಿದೆ, ನಾವು ಇದೇ ಒಂಟೆ ಸವಾರಿ ಮಾಡುತ್ತಾ ಮದೀನಕ್ಕೆ ತಲಪಿದರೆ ನಾವು ಅದನ್ನು ಬಲಿಯರ್ಪಿಸುವೆವು ಎಂದು. ನಾವು ಅದೇ ಸ್ಥಿತಿಯಲ್ಲಿದ್ದಾಗ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಗೆ ತಲಪಿದರು ಮತ್ತು ಕೇಳಿದರು. ನಿಮಗೇನಾಗಿದೆ? ಆಗ ನಾವು ಅವರಿಗೆ ಎಲ್ಲಾ ವಿಷಯ ತಿಳಿಸಿದೆವು. ಆಗ ಅವರು ನಮ್ಮ ಬಳಿ ನಿಂತು ವುಝು ಮಾಡಿದರು. ಬಾಕಿಯಾಗಿ ಉಳಿದ ನೀರಿನಲ್ಲಿ ಬಾಯಿಯ ಉಗುಳು ಹಾಕಿದರು. ಅನಂತರ ಅವರ ಆಜ್ಞೆ ಪ್ರಕಾರ ಒಂಟೆಯ ಬಾಯಿ ತೆರೆದು ಅದರ ಬಾಯಿಯೊಳಗೆ ಸ್ವಲ್ಪ ನೀರು ಹಾಕಿದೆವು. ಅನಂತರ ಅದರ ತಲೆಯ ಮೇಲೆ, ಅದರ ಕೊರಳ ಮೇಲೆ, ಅದರ ಭುಜದ ಮೇಲೆ, ಅದರ ಡುಬ್ಬದ ಮೇಲೆ, ಅದರ ಬೆನ್ನ ಮೇಲೆ, ಅದರ ಬಾಲದ ಮೇಲೆ ನೀರು ಹಾಕಿದೆವು. ಅನಂತರ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು: ಓ ಅಲ್ಲಾಹ್ ರಾಫಿಅ್ ಮತ್ತು ಖಲ್ಲಾದ್ ಈ ಒಂಟೆಯ ಮೇಲೆ ಸವಾರಿ ಮಾಡುತ್ತಾ ಸಂಚರಿಸುವ ಹಾಗೆ ಮಾಡು. ಅನಂತರ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಂದ ಹೊರಟು ಮುಂದೆ ಸಾಗಿದರು. ನಾವು ಒಂಟೆಯೇರಿ ಪ್ರಯಾಣ ಮುಂದುವರಿಸಿದೆವು. ನಾವು ಮುನ್ಸಿಫ್ ಎಂಬ ಸ್ಥಳದಲ್ಲಿ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ತಲಪಿದೆವು. ನಮ್ಮ ಒಂಟೆ ಎಲ್ಲರಿಗಿಂತ ಮುಂದೆ ಸಾಗುತ್ತಿತ್ತು. ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ನೋಡಿ ಮುಗುಳು ನಗೆ ಪ್ರಕಟಿಸಿದರು. ಅವರ ಪ್ರಾರ್ಥನೆಯಿಂದ ಒಂಟೆಯ ಬಲಹೀನತೆ ನಿವಾರಣೆ ಆಗಿತ್ತು. ಹಾಗೆ ನಾವು ಬದರ್‌ಗೆ ತಲಪಿದೆವು. ಅವರು ಹೇಳುತ್ತಾರೆ: ನಂತರ ನಾವು ಬದರ್‌ನಿಂದ ಮರಳಿ ಬರುವಾಗ ಮುಸಲ್ಲಾ ಎಂಬಲ್ಲಿ ಆ ಒಂಟೆ ಪುನಃ ಮಲಗಿ ಬಿಟ್ಟಿತು. ಆಗ ನನ್ನ ಸಹೋದರ ಅದನ್ನು ವಧಿಸಿ ಅದರ ಮಾಂಸವನ್ನು ವಿತರಣೆ ಮಾಡಿದನು.

ಇನ್ನೊಬ್ಬ ಸಹಾಬಿ ಹಝ್ರ್‌ರತ್ ಹಾರಿಸ ಬಿನ್ ಸುರಾಖ. ಹಿಜರಿ ವರ್ಷ 2ರಲ್ಲಿ ಬದರ್ ಯುದ್ಧದಲ್ಲಿ ಶಹೀದರಾದರು. ಅವರ ತಾಯಿ ರಬೀಅ ಬಿನ್ತ್ ನಝ್ರ್ ಹಝ್ರ್‌ರತ್ ಅನಸ್ ಬಿನ್ ಮಾಲಿಕರ ದೊಡ್ಡಮ್ಮ ಆಗಿದ್ದರು. ಅವರು ಹಿಜ್‌ರತ್‌ಗೆ ಮೊದಲು ತಮ್ಮ ತಾಯಿಯೊಂದಿಗೆ ಮುಸ್ಲಿಮರಾದರು. ಆಗ ಅವರ ಪಿತ ಜೀವಿಸಿರಲಿಲ್ಲ. ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮತ್ತು ಹಝ್ರ್‌ರತ್ ಸಾಯಿಬ್ ಬಿನ್ ಉಸ್ಮಾನ್ ಬಿನ್ ಮಝ್‌ಊನ್ ಮಧ್ಯೆ ಸಹೋದರ ಸಂಬಂಧದ ಪ್ರತಿಜ್ಞೆ ಮಾಡಿಸಿದ್ದರು. ಹಝ್ರ್‌ರತ್ ಹಾರಿಸ್ ಬಿನ್ ಸುರಾಖ ತಮ್ಮ ಮಾತೆಯೊಂದಿಗೆ ಬಹಳ ಉತ್ತಮವಾಗಿ ವರ್ತಿಸುವವರಾಗಿದ್ದರು. ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, ನಾನು ಸ್ವರ್ಗದಲ್ಲಿ ಪ್ರವೇಶಿಸಿದಾಗ ಅಲ್ಲಿ ಸುರಾಖರನ್ನು ಕಂಡೆನು ಎಂದು. ಹಬ್ಬಾನ್ ಬಿನ್ ಅರ್‌ಖ ಬದರ್ ಯುದ್ಧದಲ್ಲಿ ಅವರನ್ನು ಶಹೀದರನ್ನಾಗಿ ಮಾಡಿದನು. ಅವರು ನೀರು ಕುಡಿಯುತ್ತಾ ಇದ್ದಾಗ ಅವರ ಕಡೆಗೆ ಬಾಣ ಹೂಡಿದಾಗ ಅದು ಅವರ ಕೊರಳಿಗೆ ಚುಚ್ಚಿತು. ಅವರು ಶಹೀದರಾದರು. ಒಮ್ಮೆ ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಕೇಳಿದರು: ಓ ಹಾರಿಸ ನೀವು ಯಾವ ಸ್ಥಿತಿಯಲ್ಲಿ ಬೆಳಗ್ಗೆ ಎದ್ದೇಳಿದಿರಿ. ಅವರು ಹೀಗೆ ಉತ್ತರ ಹೇಳಿದರು: ನಾನು ನಿಶ್ಚಯವಾಗಿಯೂ ಅಲ್ಲಾಹನ ಮೇಲೆ ದೃಢ ವಿಶ್ವಾಸ ಹೊಂದಿರುವೆನು ಎಂಬ ಸ್ಥಿತಿಯಲ್ಲಿ ಬೆಳಿಗ್ಗೆ ಎದ್ದೆನು. ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಏನು ಹೇಳುತ್ತಿರುವೆ ಎನ್ನುವುದನ್ನು ನೋಡಬೇಕು. ಏಕೆಂದರೆ ಪ್ರತಿಯೊಂದು ಮಾತಿಗೆ ಒಂದು ವಾಸ್ತವಿಕತೆ ಇರುತ್ತದೆ. ಆಗ ಯುವಕನಾದ ಹಾರಿಸ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ನನ್ನ ಹೃದಯ ಲೋಕದ ಬಗ್ಗೆ ನಿರಾಸಕ್ತವಾಗಿದೆ. ನಾನು ರಾತ್ರೀ ಇಡೀ ಎಚ್ಚರದಿಂದಿರುತ್ತೇನೆ. ಹಗಲಲ್ಲಿ ನಾನು ದಾಹದಿಂದಿರುತ್ತೇನೆ. ಎಂದರೆ ಆರಾಧನೆ ಮಾಡುತ್ತಾ ಇರುತ್ತೇನೆ, ಉಪವಾಸ ಅನುಷ್ಠಿಸುತ್ತೇನೆ. ನಾನು ಸೃಷ್ಟಿಕರ್ತನ ಅರ್ಶನ್ನು ಬಾಹ್ಯ ನೇತ್ರಗಳಿಂದ ಕಾಣುತ್ತಿರುವೆನೋ ಎಂಬಂತಿದೆ. ನಾನು ಸ್ವರ್ಗದಲ್ಲಿರುವವರನ್ನು ಕಾಣುತ್ತಿದ್ದೇನೋ ಎಂಬಂತಿದೆ. ನಾವು ಪರಸ್ಪರ ಭೇಟಿಯಾಗುವಂತೆ ಕಾಣಿಸುತ್ತಿದೆ. ನಾನು ನರಕವಾಸಿಗಳನ್ನು ಅವರು ಅಲ್ಲಿ ಬೊಬ್ಬೆ ಹಾಕುವುದಾಗಿ ಕಾಣುವಂತೆ

ತೋರುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಇದೇ ರೀತಿ ಸ್ಥಿರವಾಗಿರಿ. ನೀವು ಎಂತಹ ದಾಸರೆಂದರೆ ಅಲ್ಲಾಹನು ನಿಮ್ಮ ವಿಶ್ವಾಸವನ್ನು ಪ್ರಕಾಶಿಸಿದ್ದಾನೆ. ಅನಂತರ ಹಝ್ರತ್ ಹಾರಿಸ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾನು ಶಹೀದ್ ಆಗುವ ಬಗ್ಗೆ ಪ್ರಾರ್ಥಿಸಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೋಸ್ಕರ ಪ್ರಾರ್ಥಿಸಿದರು. ಬದರ್ ಯುದ್ಧದಲ್ಲಿ ಶಹೀದರಾದ ಪ್ರಥಮ ಅನ್‌ಸಾರಿ ಸಹಾಬಿ ಅವರಾಗಿದ್ದರೆಂದು ವರದಿಯಾಗಿದೆ. ಹಝ್ರತ್ ಹಾರಿಸ ಶಹೀದರಾದ ಸಮಾಚಾರ ಅವರ ತಾಯಿಯವರಿಗೆ ತಲಪಿದಾಗ ಅವರ ತಾಯಿ ಹಝ್ರತ್ ರಬೀಅ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ನನಗೆ ಹಾರಿಸನ ಬಗ್ಗೆ ಎಷ್ಟು ಪ್ರೀತಿ ಇದೆ ಎಂದು ತಮಗೆ ತಿಳಿದ ವಿಷಯವಾಗಿದೆ. ಅವನು ನನಗೆ ಬಹಳ ಸೇವೆ ಮಾಡುತ್ತಿದ್ದನು. ಅವನು ಸ್ವರ್ಗವಾಸಿಯಾಗುವುದಾದರೆ ನಾನು ಸಹನೆಯಿಂದಿರುವೆನು. ಹಾಗೆ ಅಲ್ಲವಾದರೆ ನಾನು ಏನು ಮಾಡುವೆನು ಎಂದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಉಮ್ಮು ಹಾರಿಸ, ಸ್ವರ್ಗ ಒಂದಲ್ಲ. ಅನೇಕ ಸ್ವರ್ಗಗಳಿವೆ. ಹಾರಿಸ ಫಿರ್‌ದೌಸ್ ಅಲ್‌ಲಾ ಎಂಬ ಸರ್ವೋನ್ನತ ಸ್ವರ್ಗದಲ್ಲಿದ್ದಾರೆ. ಆಗ ಹಾರಿಸರ ತಾಯಿ ಮುಗುಳು ನಗುತ್ತಾ ಅಲ್ಲಿಂದ ಹೊರಟುಹೋದರು. ಅವರು ಹೇಳುತ್ತಿದ್ದರು, ಶಹಬಾಸ್ ಶಹಬಾಸ್ ಓ ಹಾರಿಸ.

ಇನ್ನೊಬ್ಬ ಸಹಾಬಿ ಹಝ್ರತ್ ಉಬಾದ್ ಬಿನ್ ಬಶರ್. ಹಿಜರಿ 11ನೇ ವರ್ಷ ಯಮಾಮ ಯುದ್ಧದಲ್ಲಿ ಶಹೀದರಾದರು. ಅವರ ಉಪನಾಮಗಳು ಅಬೂ ಬಶರ್ ಮತ್ತು ಅಬೂ ರಬೀಅ್ ಎಂದಾಗಿತ್ತು. ಅವರು ಬನೂ ಅಬ್ದುಲ್ ಅಶ್‌ಹಲ್ ಗೋತ್ರದವರಾಗಿದ್ದರು. ಅವರಿಗಿದ್ದ ಏಕಮಾತ್ರ ಪುತ್ರಿ ಸಹ ಮೃತರಾಗಿದ್ದರು. ಅವರು ಮದೀನದಲ್ಲಿ ಹಝ್ರತ್ ಮುಸ್‌ಯಿಬ್ ಬಿನ್ ಉಮ್ಮೈರ್‌ರ ಕೈಯಲ್ಲಿ ಹಝ್ರತ್ ಸಅದ್ ಬಿನ್ ಮುಆಝ್ ಮತ್ತು ಹಝ್ರತ್ ಉಸ್ಯೆದ್ ಬಿನ್ ಹಝೀರ್‌ರಿಗಿಂತ ಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಬೈಅತ್ ಮಾಡಿದರು. ಅವರನ್ನು ಹುಝ್ಯೆಫ ಬಿನ್ ಉಖ್‌ಬಾರ ಸಹೋದರನಾಗಿ ಮಾಡಲಾಗಿತ್ತು. ಅವರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಕಅಬ್ ಬಿನ್ ಅಶ್ರಫ್‌ನನ್ನು ಕೊಲ್ಲಲು ಕಳುಹಿಸಲಾದ ಜನರಲ್ಲಿ ಅವರು ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು: ಕಅಬ್‌ನನ್ನು ಬಹಿರಂಗವಾಗಿ ಕೊಲ್ಲಬಾರದು. ಕೆಲವರು ರಹಸ್ಯವಾಗಿ ಯಾವುದಾದರೂ ಯೋಗ್ಯ ಸಂದರ್ಭದಲ್ಲಿ ಅವನನ್ನು ಕೊಲ್ಲಬೇಕು. ಔಸ್‌ಗೋತ್ರದ ಒಬ್ಬ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸ್ಲಿಮರಿಗೆ ಈ ಕೆಲಸ ವಹಿಸಿಕೊಡಲಾಗಿತ್ತು. ಔಸ್‌ಗೋತ್ರದ ಮುಖಂಡ ಸಅದ್ ಬಿನ್ ಮುಆಝ್‌ರಿಂದ ಸಲಹೆ ಪಡೆದು ಕಾರ್ಯ ನಿರ್ವಹಿಸಬೇಕೆಂದು ಅವರು ಹೇಳಿದ್ದರು. ಮುಹಮ್ಮದ್ ಬಿನ್ ಮುಸ್ಲಿಮ ನಿವೇದಿಸಿದರು: ರಹಸ್ಯವಾಗಿ ಹತ್ಯೆ ಮಾಡಬೇಕಾದರೆ ಕಅಬನನ್ನು ಅವನ ಮನೆಯಿಂದ ಹೊರಗೆ ಉಪಾಯದಿಂದ ತಂದು ಸುರಕ್ಷಿತ ಸ್ಥಳದಲ್ಲಿ ಹತ್ಯೆ ಮಾಡಬೇಕಾಗುತ್ತದೆ. ಅದಕ್ಕೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನುಮತಿ ನೀಡಿದರು.

ರಹಸ್ಯವಾಗಿ ಶಿಕ್ಷೆ ನೀಡುವುದನ್ನು ತ್ಯಜಿಸುವುದರಿಂದ ಸಂಭವಿಸಬಹುದಾದ ಬೃಹತ್ತಾದ ದುಷ್ಪರಿಣಾಮಗಳನ್ನು ಪರಿಗಣಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಹಮ್ಮದ್ ಬಿನ್ ಮುಸ್ಲಿಮರ ಅಭಿಪ್ರಾಯವನ್ನು ಅಂಗೀಕರಿಸಿದ್ದರು. ಮುಹಮ್ಮದ್ ಬಿನ್ ಮುಸ್ಲಿಮರು ಸಅದ್ ಬಿನ್ ಮುಆಝ್‌ರವರ ಸಲಹೆ ಮೇರೆಗೆ ಅಬೂ ನಾಯಿಲ ಮತ್ತು ಎರಡು ಮೂರು ಸಹಾಬಿಗಳನ್ನು ತನ್ನ ಜೊತೆ ಸೇರಿಸಿ ಕಅಬನ ಮನೆಗೆ ಹೋದರು. ಕಅಬನನ್ನು ಮನೆಯೊಳಗಿನಿಂದ ಕರೆದು ಹೇಳಿದರು: ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮಿಂದ ಸದಖವಾಗಿ ಹಣ ಕೇಳುತ್ತಿದ್ದಾರೆ. ನಮ್ಮಲ್ಲಿ ಹಣವಿಲ್ಲ. ನೀವು ನಮಗೆ ಸ್ವಲ್ಪ ಹಣ ಸಾಲವಾಗಿ ಕೊಡುವಿರೋ? ಈ ಮಾತು ಆಲಿಸಿ ಕಅಬ್ ಸಂತೋಷದಿಂದ ನೆಗೆದಾಡಿದನು. ಅವನು ಹೇಳಿದನು, ಅಲ್ಲಾಹನಾಣೆ ನೀವು ಅವನಿಂದ ಬೇಸರಗೊಂಡು ಅವನನ್ನು ಬಿಟ್ಟುಬಿಡುವ ದಿನ ದೂರವಿಲ್ಲ. ಆಗ ಮುಹಮ್ಮದ್ ಹೇಳಿದರು: ನಾವು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿದ್ದೇವೆ. ಈಗ ಪರಿಣಾಮ ಏನಾಗುವುದೆಂದು ನೋಡುವೆವು. ನೀನು ನಮಗೆ ಸಾಲ ಕೊಡುವೆಯೋ ಇಲ್ಲವೋ ಎಂದು ಹೇಳು. ಕಅಬ ಹೇಳಿದನು: ಏನಾದರೂ ಗಿರವಿ ಇಟ್ಟರೆ ಸಾಲ ಕೊಡುವೆನು. ಮುಹಮ್ಮದ್ ಕೇಳಿದರು ಏನನ್ನು? ಆ ದುಷ್ಟ ಹೇಳಿದನು– ನಿಮ್ಮ ಹೆಂಗಸರನ್ನು ಗಿರವಿ ಇಡಿರಿ. ಮುಹಮ್ಮದ್ ಕೋಪವನ್ನು ಮರೆಮಾಡುತ್ತಾ ಹೇಳಿದರು: ಅದು ಹೇಗೆ ತಾನೆ ಸಾಧ್ಯ. ನಿನ್ನಂತಹವನ ಬಳಿ ನಮ್ಮ ಹೆಂಗಸರನ್ನು ಗಿರವಿ ಇಡಲಾರೆವು. ನಿನ್ನ ಬಗ್ಗೆ ನಂಬಿಕೆ ಇಲ್ಲ. ಕಅಬ್ ಹೇಳಿದನು: ಗಂಡು ಮಕ್ಕಳನ್ನೂ ಗಿರವಿ ಇರಿಸಬಹುದು. ಮುಹಮ್ಮದ್ ಹೇಳಿದರು: ಅದು ಸಹ ಸಾಧ್ಯವಿಲ್ಲ. ನಾವು ನಮ್ಮ ಮಕ್ಕಳನ್ನು ಗಿರವಿ ಇರಿಸಿ ಅರಬ್ ದೇಶದವರ ಪರಿಹಾಸಕ್ಕೆ ಗುರಿಯಾಗಲು ಸಿದ್ಧರಾಗಲಾರೆವು. ನೀನು ಒಪ್ಪುವುದಾದರೆ ನಮ್ಮ ಆಯುಧಗಳನ್ನು ಗಿರವಿ ಇಡುವೆವು. ಕಅಬ್ ಅದಕ್ಕೆ ಸಮ್ಮತಿಸಿದನು. ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಸಂಗಡಿಗರು ರಾತ್ರಿ ಬರುವೆವು ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ರಾತ್ರಿ ಹೊತ್ತು ಅವರು ಆಯುಧಗಳೊಂದಿಗೆ ಕಅಬನ ಮನೆಗೆ ಹೋದರು. ಅವರಿಗೆ ಬಹಿರಂಗವಾಗಿ ಆಯುಧ ಕೊಂಡುಹೋಗಲು ಸಾಧ್ಯವಾಯಿತು. ಅವರು ಕಅಬನನ್ನು ಮನೆಯಿಂದ ಹೊರಗೆ ಕರೆದು ಅವನೊಂದಿಗೆ ಮಾತನಾಡುತ್ತಾ ಅವನನ್ನು ದೂರ ಒಯ್ದು ಅವನನ್ನು ಕೊಂದರು. ಅನಂತರ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಕಅಬ್ ಕೊಲ್ಲಲ್ಪಟ್ಟ ಸಮಾಚಾರ ನಗರದಲ್ಲಿ ಹಬ್ಬಿದಾಗ ನಗರದಲ್ಲಿ ಗಂಭೀರ ಪರಿಸ್ಥಿತಿ ತಲೆದೋರಿತು. ಯಹೂದಿಯರು ಬಹಳ ಉದ್ವೇಗಭರಿತರಾದರು. ಯಹೂದಿಯರ ಪ್ರತಿನಿಧಿಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ

ತಮ್ಮ ನಾಯಕ ಹತ್ಯೆಯಾದ ಬಗ್ಗೆ ದೂರಿತ್ತರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಕಅಬ್ ಏನೆಲ್ಲಾ ಅಪರಾಧಗಳನ್ನು ಮಾಡಿದ್ದಾನೆಂದು ನಿಮಗೆ ತಿಳಿದಿದೆಯೇ? ಅನಂತರ ಕಅಬ್ ಮಾಡಿದ ಪ್ರತಿಜ್ಞಾಭಂಗ, ಯುದ್ಧಕ್ಕೆ ಪ್ರೇರಣೆ, ಪಿತೂರಿ, ಅಶ್ಲೀಲ ಬೈಗಳು, ಹತ್ಯೆಗಳಿಗೆ ಗೂಡತಂತ್ರ ಮೊದಲಾದವುಗಳನ್ನು ನೆನಪಿಸಿಕೊಟ್ಟರು. ಆಗ ಯಹೂದಿಯರು ಹೆದರಿ ಮೌನವನ್ನು ಅವಲಂಬಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇನ್ನು ಮುಂದೆಯಾದರೂ ನೀವು ಶಾಂತಿ ಮತ್ತು ಸಹಕಾರದಿಂದ ಜೀವಿಸಿರಿ. ಹಗೆತನ ಮತ್ತು ಪಿತೂರಿಗಳ ಬೀಜ ಬಿತ್ತ ಬೇಡಿರಿ ಎಂದು ಹೇಳಿದರು. ಅನಂತರ ಯಹೂದಿಯರ ಸಮ್ಮತಿ ಪ್ರಕಾರ ಮುಂದಿನ ಕಾಲದ ಬಗ್ಗೆ ಹೊಸ ಒಂದು ಒಡಂಬಡಿಕೆ ಬರೆಯಲಾಯಿತು. ಯಹೂದಿಯರು ಮುಸ್ಲಿಮರೊಂದಿಗೆ ಶಾಂತಿಯಿಂದ ಜೀವಿಸುವ ಬಗ್ಗೆ ಮತ್ತು ಗಲಬೆಗೊಂದಲಗಳನ್ನು ವರ್ಜಿಸುವ ಬಗ್ಗೆ ಹೊಸದಾಗಿ ವಾಗ್ದಾನ ಮಾಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಹೂದಿಯರೊಂದಿಗೆ ಕಅಬನನ್ನು ಮುಸ್ಲಿಮರು ಹತ್ಯೆ ಮಾಡಿಲ್ಲ ಎಂದು ಹೇಳಲಿಲ್ಲ. ಅವರು ಕಅಬನ ಅಪರಾಧಗಳನ್ನು ಎಣಿಸಿ ಹೇಳಿದರು. ಅದರ ಪರಿಣಾಮವಾಗಿ ಹತ್ಯೆ ನಡೆದಿರಬಹುದಾಗಿ ಸೂಚಿಸಿದರು. ಯಹೂದಿಯರಿಗೂ ಅದು ಮನವರಿಕೆಯಾಯಿತು. ಅವರು ಹೊಸ ಒಪ್ಪಂದ ಮಾಡಿದರು. ಆ ಮೂಲಕ ಯಹೂದಿಯರು ಪ್ರತೀಕಾರ ಮಾಡದಂತೆಯೂ ಮುಸ್ಲಿಮರು ಅವರಿಗೆ ಶಿಕ್ಷೆ ನೀಡದಂತೆಯೂ ಆಯಿತು. ಯಹೂದಿಯರು ಆ ಕೊಲೆ ತಪ್ಪೆಂದು ಭಾವಿಸುತ್ತಿದ್ದರೆ ಅವರು ಮೌನವನ್ನು ಅವಲಂಬಿಸುತ್ತಿರಲಿಲ್ಲ. ಅವರು ರಕ್ತದ ಪರಿಹಾರ ಕೇಳುತ್ತಿದ್ದರು. ಆದರೆ ಅವರು ಆ ರೀತಿ ಆವಶ್ಯಪಡಲಿಲ್ಲ. ಇದರಿಂದೆಲ್ಲಾ ತಿಳಿದುಬರುವುದೇನೆಂದರೆ, ಆ ಕಾಲದ ನಿಯಮಗಳ ಪ್ರಕಾರ ಆ ಹತ್ಯೆ ಉಚಿತವಾದುದೇ ಆಗಿತ್ತು.

ಕಅಬ್ ಚಲಾಯಿಸುತ್ತಿದ್ದ ಪಿತೂರಿ ಹತ್ಯೆಗಿಂತ ಹೆಚ್ಚು ಗುರುತರವಾಗಿತ್ತು. ಅಂತಹ ಅಪರಾಧಿಗೆ ಅಂತಹ ಶಿಕ್ಷೆಯೇ ಯೋಗ್ಯವಾಗಿದೆ. ಆ ಕಾಲದ ಸಂಪ್ರದಾಯ ಪ್ರಕಾರ ಆ ಶಿಕ್ಷೆ ನೀಡಲ್ಪಟ್ಟಿತು. ಯಹೂದಿಯರ ವರ್ತನೆಯಿಂದಲೂ ಸಾಬೀತಾಗುವುದೇನೆಂದರೆ, ಅಂತಹ ಶಿಕ್ಷೆ ಆ ಕಾಲದಲ್ಲಿ ನೀಡಬಹುದಾಗಿತ್ತು ಎಂದು. ಅದರ ಬಗ್ಗೆ ಯಾವುದೇ ಆಕ್ಷೇಪಕ್ಕೆ ಎಡೆ ಇರುವುದಿಲ್ಲ. ಆ ಶಿಕ್ಷೆ ಆ ಕಾಲದಲ್ಲಿ ನೀಡುವುದು ಸರಿಯಾಗಿರಲಿಲ್ಲವಾದರೆ ಯಹೂದಿಯರು ಅದರ ಬಗ್ಗೆ ಪ್ರಶ್ನಿಸುತ್ತಿದ್ದರು. ಮತ್ತು ಮೊಕದ್ದಮೆ ದಾಖಲಿಸುತ್ತಿದ್ದರು. ಬಹಿರಂಗವಾಗಿ ವಿಚಾರಣೆ ನಡೆಸಿ ಏಕೆ ಶಿಕ್ಷಿಸಲಿಲ್ಲ ಎಂದು ವಿಚಾರಿಸುತ್ತಿದ್ದರು. ಆ ಕಾಲದಲ್ಲಿ ಆ ಶಿಕ್ಷೆ ಉಚಿತವಾದುದೇ ಆಗಿತ್ತೆಂದು ಸಾಬೀತಾಗುತ್ತದೆ. ಆದರೆ ಒಂದು ವಿಷಯ ಸ್ಪಷ್ಟಪಡಿಸಲು ಬಯಸುತ್ತೇನೆ. ಇಂದಿನ ಕಾಲದಲ್ಲಿ ಭಯೋತ್ಪಾದಕರು ಇಂತಹ ಘಟನೆಗಳ ಬಗ್ಗೆ ತಪ್ಪು ಅಭಿಪ್ರಾಯ ಸೂಚಿಸುತ್ತಾರೆ. ಅದೇ ರೀತಿ ಕೆಲವು ಸರಕಾರಗಳು ಸಹ ಮಾಡುತ್ತಿವೆ. ಅಂತಹ ಕೊಲೆ ನಡೆಸುವುದು ಧರ್ಮಬದ್ಧ ಎಂದು ಅವರು ಹೇಳುತ್ತಾರೆ. ಆದರೆ ಯಾರನ್ನು ಈ ಭಯೋತ್ಪಾದಕರು ಕೊಲ್ಲುತ್ತಾರೋ ಅವರು ಪಿತೂರಿ ನಡೆಸುವವರಾಗಿರುವುದಿಲ್ಲ. ಮೇಲಿನ ಘಟನೆಯಲ್ಲಿ ಕೇವಲ ಅಪರಾಧಿಗೆ ಶಿಕ್ಷೆ ನೀಡಲಾಯಿತು. ಅವನ ಕುಟುಂಬದವರನ್ನು ಕೊಲ್ಲಲಿಲ್ಲ. ಆದರೆ ಈ ಜನರು ನಿರಪರಾಧಿ ಜನರನ್ನು, ಮಹಿಳೆಯರನ್ನು, ಮಕ್ಕಳನ್ನು ಕೊಲ್ಲುತ್ತಿದ್ದಾರೆ. ಅನೇಕ ಜನರನ್ನು ಅಂಗವಿಕಲರನ್ನಾಗಿ ಮಾಡುತ್ತಾರೆ. ಇಂದಿನ ಕಾಲದ ನಿಯಮಗಳ ಪ್ರಕಾರ ಈ ಕೆಲಸಗಳು ನ್ಯಾಯಬದ್ಧವಲ್ಲ. ಆ ಕಾಲದಲ್ಲಿ ನೀಡಿದ ಶಿಕ್ಷೆ ಸರಿಯಾಗಿತ್ತು. ಅದನ್ನು ಅಂದಿನ ಸರಕಾರವೇ ನೀಡಿತ್ತು.

ಹಝ್ರತ್ ಉಬಾದ್ ಬಿನ್ ಬಶರ್ ಶ್ರೇಷ್ಠ ಸಹಾಬರಲ್ಲಿ ಒಬ್ಬರಾಗಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಅನ್‌ಸಾರ್‌ಗಳಲ್ಲಿ ಮೂವರು ಎಂತಹ ಸ್ಥಾನ ಪಡೆದಿದ್ದರೆಂದರೆ ಯಾರೂ ಸಹ ಅವರಿಗಿಂತ ಮೇಲಿನ ಸ್ಥಾನ ಪಡೆದಿಲ್ಲ. ಅವರು, ಹಝ್ರತ್ ಸಅದ್ ಬಿನ್ ಮುಆಝ್, ಹಝ್ರತ್ ಉಸೈದ್ ಬಿನ್ ಹಝೀರ್ ಮತ್ತು ಹಝ್ರತ್ ಉಬಾದ್ ಬಿನ್ ಬಶರ್. ಹಝ್ರತ್ ಉಬಾದ್ ಬಿನ್ ಬಶರ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್‌ಸಾರ್‌ಗಳನ್ನು ಸಂಬೋಧಿಸಿ ಹೇಳಿದರು: ಓ ಅನ್‌ಸಾರ್ ಜನರೇ, ನೀವು ನನ್ನ ಶಿಆರ್ ಆಗಿದ್ದೀರಿ. ಎಂದರೆ ನನ್ನ ಶರೀರಕ್ಕೆ ತಾಗಿಕೊಂಡು ಇರುವ ಬಟ್ಟೆಯ ಹಾಗೆ ಇರುವವರು. ಉಳಿದ ಜನರು ದಸಾರ್ ಆಗಿದ್ದಾರೆ. ಎಂದರೆ ಮೇಲೆ ಹೊದಿಸುವ ಚಾದರ್‌ನ ಹಾಗೆ. ನಿಮ್ಮಿಂದ ನನಗೆ ಕಷ್ಟಕರವಾದುದೇನೂ ತಲಪಲಾರದೆಂದು ನನಗೆ ಭರವಸೆ ಇದೆ.

ಹಝ್ರತ್ ಉಬಾದ್ ಬಿನ್ ಬಶರ್ ಯಮಾಮ ಯುದ್ಧದಲ್ಲಿ 45ನೇ ವಯಸ್ಸಿನಲ್ಲಿ ಶಹೀದರಾದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಮನೆಯಲ್ಲಿ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದಾಗ ಮಸ್‌ಜಿದ್‌ನಲ್ಲಿ ನಮಾಝ್ ನಿರ್ವಹಿಸುತ್ತಿದ್ದ ಉಬಾದ್ ಬಿನ್ ಬಶರ್‌ರ ಶಬ್ದ ಕೇಳಿಸಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಆಯಿಶಾ, ನಾವು ಆಲಿಸುತ್ತಿರುವುದು ಉಬಾದರ ಶಬ್ದವನ್ನಲ್ಲವೇ? ನಾನು ಹೇಳಿದೆ: ಹೌದು ಎಂದು. ಅವರು ಹೇಳಿದರು: ಓ ಅಲ್ಲಾಹ್, ಉಬಾದನ ಮೇಲೆ ದಯೆದೋರು.

ಹುದೈಬಿಯಾ ಸಂಧಿಯ ಪ್ರಯಾಣದಲ್ಲಿ ಉಬಾದ್ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರ ಬಹಳ ದೊಡ್ಡ ಸಂಖ್ಯೆಯ ಜನರ ಮುಂಭಾಗದಲ್ಲಿ ಕಾವಲು ನಡೆಸಲು ಉಬಾದ್ ಬಿನ್ ಬಶರ್‌ರ ನೇತೃತ್ವದಲ್ಲಿ ಇಪ್ಪತ್ತು ಸವಾರರ ಒಂದು ದಳವನ್ನು ನೇಮಿಸಿದ್ದರು. ಅವರು ಬಹಳ ವಿಶ್ವಾಸಾರ್ಹ ಸಹಾಬಿಯಾಗಿದ್ದರು. ಹುದೈಬಿಯಾ ವೇಳೆಯ ಬೈಅತ್ ರಿಝ್‌ವಾನ್‌ನಲ್ಲಿ ಸಹ ಅವರು ಸೇರಿದ್ದರು. ಝಾತುರ್ರಿಖಾಅ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಂದಿನ ರಾತ್ರಿ ನಮಗೆ ಪಹರೆ ನೀಡಲು ಯಾರಿದ್ದಾರೆ? ಎಂದು ಕೇಳಿದಾಗ ಹಝ್ರತ್ ಉಬಾದ್ ಬಿನ್ ಬಶರ್ ಮತ್ತು ಹಝ್ರತ್ ಅಮ್ಮಾರ್ ಬಿನ್

ಯಾಸಿರ್ ಮುಂದೆ ಬಂದು ಹೇಳಿದರು: ನಾವು ಪಹರೆ ನೀಡುವೆವು. ಅವರಿಬ್ಬರೂ ಸರದಿ ಪ್ರಕಾರ ಪಹರೆ ನೀಡಿದರು. ರಾತ್ರಿ ಅಂಧಕಾರದಲ್ಲಿ ನಜ್‌ದ್ ಗೋತ್ರದ ಒಬ್ಬನು ಹಝ್ರತ್ ಉಬಾದ್ ಮೇಲೆ ಬಾಣ ಚಲಾಯಿಸಿದನು. ಆಗ ಅವರು ನಮಾಝ್ ನಿರ್ವಹಿಸುತ್ತಿದ್ದರು. ಬಾಣ ಅವರ ಶರೀರಕ್ಕೆ ತಗಲಿದರೂ ಅವರು ನಮಾಝ್ ಮುಂದುವರಿಸಿದರು. ಅವನು ಮೂರು ಬಾಣಗಳನ್ನು ಅವರ ಮೇಲೆ ಚಲಾಯಿಸಿದನು. ಅವರ ಶರೀರದಿಂದ ಧಾರಾಳ ರಕ್ತ ಹರಿಯಿತು. ಅವರು ನಮಾಝ್ ಪೂರ್ಣವಾಗಿ ನಿರ್ವಹಿಸಿದ ನಂತರ ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರನ್ನು ಎಬ್ಬಿಸಿದರು. ಅವರು ಹೇಳಿದರು: ನೀವು ನನ್ನನ್ನು ಮೊದಲೇ ಏಕೆ ಎಬ್ಬಿಸಲಿಲ್ಲ. ಹಝ್ರತ್ ಉಬಾದ್ ಹೇಳಿದರು: ನಾನು ಸೂರತುಲ್ ಕಹ್‌ಫ್ ಪಠಿಸುತ್ತಿದ್ದೆ. ನಮಾಝನ್ನು ಮಧ್ಯದಲ್ಲಿ ನಿಲ್ಲಿಸಲು ನಾನು ಇಷ್ಟಪಡಲಿಲ್ಲ ಎಂದು ಹೇಳಿದರು. ಅವರು ಯಮಾಮ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸವಾದ್ ಬಿನ್ ಗಝೀ ರಝಿಯಲ್ಲಾಹು ಅನ್‌ಹು. ಅವರು ಅನ್‌ಸಾರ್ ಅಗಿದ್ದರು. ಅವರು ಬನೂ ಅದೀ ಬಿನ್ ನಜ್ಜಾರ್ ಗೋತ್ರಕ್ಕೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬದರ್ ಯುದ್ಧದಲ್ಲಿ ಅವರು ಖಾಲಿದ್ ಬಿನ್ ಹಿಶಾಮ್ ಮಖ್‌ಝೂಮಿಯನ್ನು ಸೆರೆ ಹಿಡಿದಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಖೈಬರ್‌ನ ಅಧಿಕಾರಿಯಾಗಿ ನೇಮಿಸಿದ್ದರು. ಅವರು ಅಲ್ಲಿಂದ ಉತ್ತಮ ಖರ್ಜೂರ ತಂದಾಗ ಅವರಿಂದ ಒಂದು ಸೇರು ಉತ್ತಮ ಖರ್ಜೂರವನ್ನು ಎರಡು ಸೇರು ಸಾಮಾನ್ಯ ಖರ್ಜೂರವನ್ನು ಬದಲಿಯಾಗಿ ನೀಡಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖರೀದಿಸಿದ್ದರು. ಬದರ್ ಯುದ್ಧದ ಸಂದರ್ಭದಲ್ಲಿ ನಮಾಝ್ ಮಾಡುವ ವೇಳೆ ಒಂದು ಬಾಣವನ್ನು ಬಳಸಿ ಮುಸ್ಲಿಮರ ಸಾಲುಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೇರವಾಗಿ ಮಾಡುತ್ತಿದ್ದರು. ಅವರ ಕೈಯಲ್ಲಿದ್ದ ಬಾಣ ಹಝ್ರತ್ ಸವಾದರ ಎದೆಗೆ ತಗಲಿತು. ಹಝ್ರತ್ ಸವಾದ್ ಹೇಳಿದರು: ಓ ಅಲ್ಲಾಹನ ಸಂದೇಶವಾಕರೇ ತಾವು ನನಗೆ ಬಾಣದಿಂದ ಗಾಯ ಮಾಡಿದ್ದೀರಿ. ಅಲ್ಲಾಹನಾಣೆ ನಾನು ಪ್ರತೀಕಾರ ಮಾಡುವೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅತ್ಯಂತ ವಾತ್ಸಲ್ಯದಿಂದ ಹೇಳಿದರು: ಸವಾದ್ ನೀನು ನನ್ನ ಮೇಲೆ ಬಾಣ ಚಲಾಯಿಸು. ಅವರು ತನ್ನ ಎದೆಯಿಂದ ಬಟ್ಟೆ ಎತ್ತಿದಾಗ ಹಝ್ರತ್ ಸವಾದ್ ಪ್ರೀತಿಭರಿತರಾಗಿ ಮುಂದೆ ಸಾಗಿ ಎದೆಯನ್ನು ಚುಂಬಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀನು ಇದೇನು ಮಾಡಿದೆ? ಹಝ್ರತ್ ಸವಾದ್ ದುಃಖಭರಿತರಾಗಿ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ಶತ್ರು ನಮ್ಮ ಮುಂದೆ ಇದ್ದಾನೆ. ನಾವು ಇಲ್ಲಿಂದ ಬದುಕುಳಿದು ಹೋಗುವೆವೋ ಇಲ್ಲವೋ ಎಂದು ತಿಳಿಯದು. ನಾನು ಶಹಾದತ್ ಗಳಿಸುವ ಮೊದಲು ತಮ್ಮ ಶರೀರವನ್ನು ನನ್ನ ಶರೀರದಿಂದ ಸ್ಪರ್ಶಿಸಲು ಬಯಸಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೋಸ್ಕರ ಶುಭವಾಗಲು ಪ್ರಾರ್ಥಿಸಿದರು.

ಅಲ್ಲಾಹನು ಈ ಹೊಳೆಯುತ್ತಿರುವ ನಕ್ಷತ್ರಗಳ ಪದವಿಗಳನ್ನು ಉನ್ನತಗೊಳಿಸಲಿ. ನಮಗೆ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವುದರ ವಾಸ್ತವಿಕತೆ ಅರಿತುಕೊಳ್ಳುವ ಭಾಗ್ಯವನ್ನು ಅಲ್ಲಾಹನು ನೀಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 20-07-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon